ವಿಶಾಖ ಎನ್.



# ಅವಕಾಶದಾಕಾಶದಲ್ಲಿ ಶ್ರೀಲೀಲಾ

‘ಕಿಸ್’ ಕನ್ನಡ ಸಿನಿಮಾದಲ್ಲಿ ಅಭಿನಯಿಸಿದ್ದಾಗ ಶ್ರೀಲೀಲಾ ಇನ್ನೂ 17 ವರ್ಷದ ಹುಡುಗಿ. ಆಗ ನಿರ್ದೇಶಕ ಎ.ಪಿ. ಅರ್ಜುನ್ ಅವರ ಮುಗ್ಧ ಚಹರೆ, ಸ್ನಿಗ್ಧ ಸೌಂದರ್ಯ ಗುರುತಿಸಿ, ಅವಕಾಶ ಕೊಟ್ಟಿದ್ದರು. ಆಮೇಲೆ ‘ಭರಾಟೆ’ ಸಿನಿಮಾದಲ್ಲಿ ಮಿಂಚಿದ್ದೂ ಇದೇ ಬೆಡಗಿ. ಅದಾದ ಮೇಲೆ ‘ಬೈ ಟೂ ಲವ್’ ಎಂಬ ಇನ್ನೊಂದು ಸಿನಿಮಾ ಅವಕಾಶ. ಅವರೆಲ್ಲಿ ಮಾಯವಾದರು ಅಂದುಕೊಳ್ಳುವಷ್ಟರಲ್ಲಿ ತೆಲುಗಿನ ‘ಪೆಲ್ಲಿಸಂದಾಡಿ’ ಸಿನಿಮಾ ಬಂತು. ಅಲ್ಲಿಂದ ಅವರೂ ಪರಭಾಷಾ ಪಾಲಾದರು.

ಶ್ರೀಲೀಲಾ ತಾಯಿ ಸ್ವರ್ಣವಲ್ಲಿ ಬೆಂಗಳೂರಿನಲ್ಲಿ ಸ್ತ್ರೀ ರೋಗ ತಜ್ಞೆ. ತಂದೆ ಉದ್ಯಮಿ. ಅಪ್ಪ–ಅಮ್ಮ ವಿವಾಹ ವಿಚ್ಛೇದನ ಪಡೆದ ಮೇಲೆ ಹುಟ್ಟಿದವರು ಶ್ರೀಲೀಲಾ. ಅಮೆರಿಕದ ನಗರಗಳಲ್ಲಿ ಅಂಬೆಗಾಲಿಟ್ಟೂ ಗೊತ್ತು. ಬೆಂಗಳೂರಿನ ಸುಂದರ ಹವಾಗುಣದ ಪರಿಚಯವೂ ಇತ್ತು.

ಈಗ ಅವರಿಗೆ ಮೇಲಿಂದ ಮೇಲೆ ತೆಲುಗು ಸಿನಿಮಾ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ರವಿತೇಜಾ ನಾಯಕನಾಗಿರುವ ‘ಧಮಾಕ’, ಗಾಲಿ ಜನಾರ್ದನ ರೆಡ್ಡಿ ಮಗ ಕಿರೀಟಿ ರೆಡ್ಡಿ ನಾಯಕನಾಗಿರುವ ಕನ್ನಡ–ತೆಲುಗು ಭಾಷೆಯ ‘ಜೂನಿಯರ್’, ನಾಯಕ ನಿತಿನ್‌ಗಾಗಿ ವಕ್ಕಂತಂ ವಂಶಿ ನಿರ್ದೇಶನದ ಹೊಸ ತೆಲುಗು ಸಿನಿಮಾ ಎಲ್ಲದರಲ್ಲೂ ಶ್ರೀಲೀಲಾ ನಾಯಕಿ. ರಶ್ಮಿಕಾ ಮಂದಣ್ಣ ಬಹುಭಾಷಾ ಸಿನಿಮಾಗಳಲ್ಲಿ ಬ್ಯುಸಿ ಆದ ಹೊತ್ತಿನಲ್ಲೇ ಬೆಂಗಳೂರು ಗಾಳಿ ಕುಡಿದ ಕುಡಿಯೊಂದು ಅಲ್ಲಿ ಸದ್ದುಮಾಡತೊಡಗಿರುವುದು ಗಮನಾರ್ಹ. ■

# ಮುರಿದ ಪ್ರೇಮಕೆ ರಣಬೀರ್ ವ್ಯಾಖ್ಯಾನ

ರಣಬೀರ್ ಕಪೂರ್. ಈಗ ಪುಟ್ಟ ಮಗುವಿನ ತಂದೆ. ತುಸು ಹಿಂದೆ ನೋಡಿದಾಗ, ಆಲಿಯಾ ಭಟ್ ಪತಿ. ಅದಕ್ಕೂ ಹಿಂದೆ, ಆಲಿಯಾ ಭಟ್ ಪ್ರೇಮಿ. ವರ್ಷಗಳ ಹಿಂದೆ, ಪ್ರೇಮಕ್ಕೆ ಲಾಯಕ್ಕೇ ಅಲ್ಲದ ವ್ಯಕ್ತಿ ಎನ್ನುವ ಪ್ರತಿಕ್ರಿಯೆ ಪಡೆದವರು. ಆದರೆ, ಅವರ ಪ್ರಕಾರ ಆಗ ತಾವು ಭಗ್ನಪ್ರೇಮಿ.

ದೀಪಿಕಾ ಪಡುಕೋಣೆ ಹಾಗೂ ಕತ್ರಿನಾ ಕೈಫ್ ಇಬ್ಬರ ಜತೆಗೆ ರಣಬೀರ್ ಪ್ರೇಮಸಲ್ಲಾಪ ನಡೆದ ಸಂಗತಿ ಗುಟ್ಟೇನೂ ಆಗಿರಲಿಲ್ಲ. ಆ ಪ್ರೇಮ ಕಹಿಯಾದ ನಂತರ ದೀಪಿಕಾ ಪಡುಕೋಣೆ ಮಾನಸಿಕವಾಗಿ ಕಂಗೆಟ್ಟ ಅನುಭವವೂ ಸಹೃದಯರಿಗೆ ಗೊತ್ತು. ದೀಪಿಕಾ ಆ ಸಂದರ್ಭವನ್ನು ಎಷ್ಟೋ ಸಲ ನೆನಪು ಮಾಡಿಕೊಂಡಿದ್ದಾರೆ. ಆಗೆಲ್ಲ ರಣಬೀರ್ ಮೌನವಾಗಿ ಇರುತ್ತಿದ್ದರು. ಅದಕ್ಕೆ ಕೆಲವು ಸಿನಿಮಾ ಅಭಿಮಾನಿಗಳು ಮೌನಂ ಸಮ್ಮತಿ ಲಕ್ಷಣಂ ಎಂದೂ ಒಕ್ಕಣೆ ಬರೆದಿದ್ದರು.

ಇತ್ತೀಚೆಗೆ ರಣಬೀರ್ ಸಂದರ್ಶನವೊಂದರಲ್ಲಿ ಮಾತನಾಡುವಾಗ ಆ ಕುರಿತು ಪರೋಕ್ಷವಾಗಿ ಪ್ರಶ್ನೆ ಎದುರಾಯಿತು. “ಆಗ ನಾನು ಕಲ್ಲವಿಲಗೊಂಡಿದ್ದೆ. ಮುನ್ನಾಭಾಯಿ ಎಂಬಿಬಿಎಸ್ ಸಿನಿಮಾದಲ್ಲಿ ಕ್ಯಾನ್ಸರ್ ಬಂದ ಒಬ್ಬಾತ ಆಸ್ಪತ್ರೆ ಹಾಸಿಗೆಯಲ್ಲಿ ಮಲಗಿರುವಾಗ ಬರುವ ಹಾಡಿನಂತಹುದೇ ಸ್ಥಿತಿ. ಆ ಹಾಡಲ್ಲಿ ‘ವಾತಾವರಣಕ್ಕೆ ಐಶ್ವರ್ಯಾ ಪ್ರವೇಶವಾದದ್ದೇ ಪರಿಸ್ಥಿತಿ ಬದಲಾಯಿತು’ ಎನ್ನುವ ಸಾಲಿದೆ. ನನ್ನ ಬದುಕಿನಲ್ಲಿಯೂ ಮುಂದೆ ಹಾಗೆಯೇ ಆಯಿತು” ಎಂದು ರಣಬೀರ್ ಹೇಳಿಕೊಂಡಿದ್ದಾರೆ. ಅವರ ಆ ಉತ್ತರ ಓದಿದವರು, ‘ಇವನಿಂದಲೇ ಇಬ್ಬರೂ ನಟಿಯರು ಸಾಕಷ್ಟು ಅನುಭವಿಸಿದ್ದರು. ಈಗ ನೋಡಿದರೆ ಹೀಗೆ ಹೇಳುತ್ತಾನೆ’ ಎಂದು ಸಾಮಾಜಿಕ ಜಾಲತಾಣದಲ್ಲಿ ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ.

ರಣಬೀರ್ ಕಪೂರ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಯೌವನದ ದಿನದ ಘಟನೆಯೊಂದನ್ನು ಮೆಲುಕು ಹಾಕಿದ್ದಾರೆ. ಅವರು ಕೋಣೆಯಲ್ಲಿ ಕದ್ದು ಸಿಗರೇಟ್ ಸೇದುತ್ತಿದ್ದಾಗ, ಅಮ್ಮ ನೀತು ಕಪೂರ್ ಅಕಸ್ಮಾತ್ತಾಗಿ ನೋಡಿಬಿಟ್ಟರಂತೆ. ಅವರು ಆಗ ಕೊಟ್ಟ ಪ್ರತಿಕ್ರಿಯೆ ಕಂಡು ರಣಬೀರ್‌ಗೆ ದಿಗ್ಭ್ರಮೆ ಆಯಿತಂತೆ. ಮಗ ಹೆರಾಯಿನ್ ಚಟಕ್ಕೆ ಬಿದ್ದಿರಬೇಕು ಎನ್ನುವುದು ತಾಯಿಯ ಕಲ್ಪನೆಯಾಗಿತ್ತು. ಕ್ಷಮೆ ಕೇಳಿ, ಅದು ಸಿಗರೇಟ್ ಅಷ್ಟೆ ಎಂದು ಪರಿಪರಿಯಾಗಿ ಹೇಳಿದರೂ ಅವರ ಕಣ್ಣಂಚಿನ ನೀರು, ಮನದ ದುಗುಡ ಕಡಿಮೆಯಾಗಿರಲಿಲ್ಲವಂತೆ.

ಕೆಲವೊಮ್ಮೆ ಇಂತಹ ಸಣ್ಣ ಘಟನೆಗಳು ಮನಸ್ಸನ್ನು ಮುರಿದುಬಿಡುತ್ತವೆ ಎಂದೂ ರಣಬೀರ್ ಸ್ವಾನುಭವ ಹಂಚಿಕೊಂಡಿದ್ದಾರೆ.

ರಣಬೀರ್ ಅಭಿನಯದ ‘ತೂ ಝೂಟಿ ಮೈ ಮಕ್ಕರ್’ ಸಿನಿಮಾ ತೆರೆಕಂಡು, ಅಷ್ಟೇನೂ ಉತ್ತಮ ಪ್ರತಿಕ್ರಿಯೆ ಪಡೆಯಲಿಲ್ಲ. ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ ‘ಅನಿಮಲ್’ ಸಿನಿಮಾ ಮೇಲೆ ಅವರೀಗ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ■

